ಬಿ. ಚಂದ್ರೇಗೌಡ, ಬೆಂಗಳೂರು

ದೇವಾಲಯಕ್ಕೂ, ವಿದ್ಯಾಲಯಕ್ಕೂ ಏನು ವ್ಯತ್ಯಾಸ?



ಅಲ್ಲಿ ಶುಕ್ಲಾಂಬರಧರಂ; ಇಲ್ಲಿ ಶುಲ್ಕಾಂಬರ ಝಳಂ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಕೆಲವರು ಬೇಡ ಬೇಡ ಎಂದರೂ ಹಣ ಸೇರುತ್ತಲೇ ಇರುವುದರ ಕಾರಣ?

‘ಕೊಟ್ಟಿದ್ದು ಸಾಲ್ದೇನೋ...’ ಎಂಬ ಶಂಕೆಯಿಂದ ಮತ್ತಷ್ಟು ಕೊಡುವುದರಿಂದ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ನೆರಳು ನಮ್ಮನ್ನು ಹಿಂಬಾಲಿಸುತ್ತದೆ. ಮಂತ್ರಿಗಳನ್ನು ಯಾರು ಹಿಂಬಾಲಿಸುತ್ತಾರೆ?

ಕೆಲವರ ವಿಷಯದಲ್ಲಂತೂ ಹಿಂದೊಮ್ಮೆ ಒದ್ದು ಒಳಹಾಕಿದ್ದ ಪೊಲೀಸರೇ ಇಂದು ಸೆಕ್ಯುರಿಟಿಯಾಗಿ!

ಕೆ.ವಿ. ಶಿವಕುಮಾರ್, ಮೈಸೂರು

ಪ್ರೇಮನಿವೇದನೆಯನ್ನು ಬರೆದು ತಿಳಿಸಲೆ, ಫೋನ್ ಮಾಡಿ ತಿಳಿಸಲೆ?



ಅವಳೆದುರು ನಿಲ್ಲಿ; ಕಣ್ಣುಗಳು ಹೇಳದ್ದನ್ನು ಇನ್ನಾವುವೂ ಹೇಳಲಾರವು.

ಬಾ.ರಂ. ಸುರೇಶ್, ಶಿವಮೊಗ್ಗ

ಹಿಂದೆಲ್ಲಾ ಆಷಾಢಕ್ಕೆ ಸೊಸೆ ತವರಿಗೆ. ಈಗ ಅತ್ತೆ–ಸೊಸೆ ಒಟ್ಟಿಗೆ ಇರುವರಲ್ಲಾ, ಏನೂ ಭಯವಿಲ್ಲವೆ?

ಇದೆಯಂತೆ–ತವರಿಗೆ ಹೋದರೆ ಹಿಂದಿರುಗಲು ಎಂಬ ಭಯ.

ಮಹಾವೀರ ಕಾಸರ, ಶಿವಮೊಗ್ಗ

ರಾಜಕಾರಣಿಗಳಿಗೆ ವಿರೋಧಪಕ್ಷದವರ ಬಗ್ಗೆ ಧನಾತ್ಮಕ ಭಾವನೆ ಬರುವುದು ಯಾವಾಗ?

ಸ್ವಂತ ಪಕ್ಷದಲ್ಲಿ ಭಿನ್ನತೆ ಮೂಡಿ ಸಮ್ಮಿಶ್ರ ಅವಶ್ಯವಾದಾಗ.

ದಿನೇಶ್, ಗುಡ್ಡದೂರು

ಮಹಾತ್ಮರು, ಯುಗಪುರುಷರು ಹುಟ್ಟಿದ ದಿನವನ್ನು ಜಯಂತಿ ಎನ್ನಲು ಕಾರಣವೇನು?

ಯ– ಎಂದರೆ ತ್ಯಾಗ; ಜ– ಜನರಿಗಾಗಿ ಯಂ ತ್ಯಾಗವನ್ನು ಮಾಡಿದವರ ತಿ– ತಿಥಿ(ದಿನ).

ಕೆ.ಎಂ. ವಿಭೂತಿ, ಹರಿಹರ

ಪ್ರಭುಗಳು ಸತ್ತರೆ ದೇಶಕ್ಕೆ ತುಂಬಲಾಗದ ನಷ್ಟ. ಪ್ರಜೆಗಳು ಸತ್ತರೆ?

ಪರಿಹಾರನಿಧಿಯ ನೆಪದಲ್ಲಿ ತುಂಬಿಕೊಳ್ಳಬಲ್ಲ ಕೋಷ್ಠ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಗುರುಗಳೆ, ಇಂದಿನ ಯುಗದಲ್ಲಿ ಯಾರು ಭಾಗ್ಯವಂತರು?

ಭಾಗ್ಯ ಎಂಬ ಸನ್ನಡತೆಯ ಸುಂದರಿಯನ್ನು ಮದುವೆಯಾದವರು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಮಾತುಗಳೇಕೆ ಮೌನವಾಗುತ್ತವೆ?

ಗರ್ಭ ಧರಿಸಿ ಮತ್ತಷ್ಟು ವಿವೇಕಯುತ ಮಾತುಗಳನ್ನು ಹೆರಲು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಶ್ರೀಮಂತರಿಗಿಂತ ಭಿಕ್ಷುಕರು ಹೆಚ್ಚು ಸಂತೋಷವಾಗಿರಲು ಕಾರಣವೇನು?

ಕಳ್ಳರ ಚಿಂತೆ ಇಲ್ಲದೆ ಒಳ್ಳೆಯ ನಿದ್ರೆ ಮಾಡುವುದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕಲಿಯುಗದ ಸನ್ಯಾಸಿ ಆಶ್ರಮಗಳಿಗೂ, ರೆಸಾರ್ಟಿಗೂ ವ್ಯತ್ಯಾಸ?

ಆಶ್ರಮಗಳು ಸರ್ಕಾರದ ಕೃಪೆ ಬೇಡುವ ತಾಣಗಳು; ರೆಸಾರ್ಟು ಖರೀದಿಗಿರುವ ಪುಢಾರಿಗಳ ಬೋನು.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಮನೆಗೆ ಮಕ್ಕಳು ಚಂದ. ಬಾಗಿಲಿಗೆ ತೋರಣ ಚಂದ. ದೇಶಕ್ಕೆ...?

ಭ್ರಷ್ಟರನ್ನು ಸಿಗಿದು ತೋರಣ ಕಟ್ಟಿದರೆ ಬಲು ಚೆನ್ನ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು

ಪಿತ್ರಾರ್ಜಿತ ರಾಜಕಾರಣಿಗಳಿಗೇಕೆ ಹೆಚ್ಚು ಕೊಬ್ಬು?

ತಾತ, ಅಪ್ಪನ ಕೊಬ್ಬಿನೊಡನೆ ಸ್ವಯಾರ್ಜಿತ ಕೊಬ್ಬೂ ಸೇರುವುದರಿಂದ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಅರಮನೆಗೂ, ಸೆರೆಮನೆಗೂ ವ್ಯತ್ಯಾಸವೇನು?

ಅರಮನೆ ರಾಜರ ಸೆರೆಮನೆ. ಸೆರೆಮನೆ ಪ್ರಭಾವಿ ಖದೀಮರ ಅರಮನೆ.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು

ಹಿಂದೆಲ್ಲ ಹರಿದ ಬಟ್ಟೆಯನ್ನು ಧರಿಸಿದರೆ ದರಿದ್ರ ಎನ್ನುತ್ತಿದ್ದರು. ಇಂದು?

ಛಿದ್ರಂ ಸರ್ವತ್ರ ಭೂಷಣಂ.

ಎಸ್.ಎನ್.ಮಹಾಬಲರಾವ್, ಎನ್ನಾರ್‍ಪುರ

ಗಂಡ ಇದ್ದೂ ಇಲ್ಲದಂತೆ...?



ಓಹ್! ನಗಾರಿಯ ಮುಂದಿನ ತಂಬೂರಿ!

ಅಮರಯ್ಯಾ ಪತ್ರಿಮಠ, ಸುರಪುರ

ದೇವತೆಗಳು ಅಲಂಕಾರಪ್ರಿಯರೆ?

‘ಹೌದು’ ಎಂದರು ಅಲಂಕಾರ ವಸ್ತುಗಳ ಅಂಗಡಿಯವರು.

ಕೆ.ವಿ. ಗೋವಿಂದಾಚಾರಿ, ಮೈಸೂರು

ಭ್ರಷ್ಟ ಅಧಿಕಾರಿಗಳನ್ನು ತಿಮಿಂಗಲಕ್ಕೆ ಹೋಲಿಸುವುದು ಏಕೆ?

ಮೀನ್ ಮೆಂಟಾಲಿಟಿ ಇರುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕನ್ನಡಿ ಒಡೆದರೆ ಸಪ್ಪಳವಾಗುತ್ತದೆ. ಮನಸ್ಸುಗಳು ಒಡೆದರೆ?

ಜೀವನ ಒದ್ದೆಯಾದ ಹಪ್ಪಳವಾಗುತ್ತವೆ.

■ ರಾಮ್